ಶ್ರೀ ಎಸ್.ಎಂ. ಕೃಷ್ಣ : ರಾಜ್ಯಸರ್ಕಾರಕ್ಕೆ ಹೈಕೋರ್ಟಿನ ರಿಜಿಸ್ಟ್ರಾರ್ ಜನರಲ್ ಏನು ತಿಳಿಸುತ್ತಾರೋ ಅಷ್ಟು ಮಾತ್ರ ನಮಗೆ ಅಧಿಕೃತವಾಗಿ ಬರಬಹುದಾದಂಥ ಮಾಹಿತಿ. ಮುಖ್ಯ ನ್ಯಾಯಾಧೀಶರ ನಿರ್ಣಯವನ್ನು ರಾಜ್ಯಸರ್ಕಾರವೂ ಕೂಡ ಬಹಳ ಉತ್ಸುಕತೆಯಿಂದ ನಿರೀಕ್ಷೆ ಮಾಡುತ್ತಿದೆ.

ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರಕ್ಕೆ ಕುಡಿಯುವ ನೀರಿನ ಹೊಸ ಪೈಪ್ ಅಳವಡಿಸುವುದು

367(3199) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಪಟ್ಟಣದ ಕುಡಿಯುವ ನೀರು ಸರಬರಾಜು ವಿತರಣಾ ಪೈಪ್‌ಗಳನ್ನು ಬದಲಾಯಿಸಿ ಹೊಸದಾಗಿ ಪೈಪ್‌ಗಳನ್ನು ಅಳವಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು? ಈ ಕಾಮಗಾರಿಗೆ ತಕ್ಷಣ ಮಂಜೂರಾತಿ ನೀಡಿ ಹಣ ಒದಗಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಇ) ಈ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಸಂಕೇಶ್ವರ ಪಟ್ಟಣಕ್ಕೆ ವಿತರಣಾ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲು ಹಾಗೂ ವಿವಿಧ ಸ್ಥಳಗಳಲ್ಲಿ ನೀರು ಶೇಖರಣಾಗಾರಗಳನ್ನು ನಿರ್ಮಿಸಲು ರೂ. 404.00 ಲಕ್ಷದ ಅಂದಾಜುಗಳನ್ನು ತಯಾರಿಸಿದ್ದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ : ಮಾನ್ಯ ಅಧ್ಯಕ್ಷರೇ, ಇವರು ಇದೇ ಉತ್ತರ ಕೊಡುತ್ತಾರೆ, ಪರಿಶೀಲನೆ ಮಾಡುತ್ತೇವೆ, ಈ ವರ್ಷ ಪ್ರಾರಂಭ ಮಾಡುತ್ತೇವೆಂದೇ ಹೇಳುತ್ತಿದ್ದಾರೆ. ಹೋದ ಸಲ ನಗರಾಭಿವೃದ್ಧಿ ಸಚಿವರಾದ ಮಾನ್ಯ ಚಿಮ್ಮನಕಟ್ಟಿಯವರೂ ಕೂಡ ಇದನ್ನೇ ಹೇಳಿದ್ದರು. ಈ ವರ್ಷ ತಕ್ಷಣ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಅದಕ್ಕೆ ಇವತ್ತು ಮುಖ್ಯಮಂತ್ರಿಗಳೇ ಉತ್ತರ ಹೇಳುತ್ತಿದ್ದಾರೆ. ಅವರೇ ಹಣಕಾಸಿನ ಮಂತ್ರಿಗಳು ಇರುವುದರಿಂದ, ಈ ವರ್ಷ ಹಣಕಾಸಿನ ವ್ಯವಸ್ಥೆ ಮಾಡಿ ತಕ್ಷಣ ಇದನ್ನು ಪ್ರಾರಂಭ ಮಾಡಬೇಕು. ಏಕೆಂದರೆ, ಇದಕ್ಕೆ ಸುಮಾರು 12 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ, ಸಂಕೇಶ್ವರ, ಹುಕ್ಕೇರಿ ಮತ್ತು ಸುತ್ತಮುತ್ತಲಿನ ನಗರಗಳಿಗೆ ಕುಡಿಯುವ ನೀರಿನ ಬಗ್ಗೆ ಪ್ರಾರಂಭ ಮಾಡಿದರು. ನಂತರ, ಈ ಕುಡಿಯುವ ನೀರಿನ ವಿತರಣಾ ವ್ಯವಸ್ಥೆ ಏನಿದೆ ಅದು ಸರಿ ಇಲ್ಲ. ಇವತ್ತು 40 ಪರ್ಸೆಂಟ್ ವೇಸ್ಟೇಜ್ ಆಗಿ ಹೋಗುತ್ತಿದೆ. ಈ ಫಿಲ್ಟರ್ ವಾಟರನ್ನು ಗಟಾರಗಳಿಗೆ ಬಿಡುವಂಥ ವ್ಯವಸ್ಥೆ ಕೂಡ ಆಗಿದೆ. ಅದಕ್ಕಾಗಿ ತಕ್ಷಣ ಸರ್ಕಾರ ಈ ವಿತರಣಾ ವ್ಯವಸ್ಥೆಯನ್ನು ಮಾಡಬೇಕು ಮತ್ತು ಆಶ್ವಾಸನೆ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಸಂಕೇಶ್ವರ ಪಟ್ಟಣಕ್ಕೆ ಕುಡಿಯುವ ನೀರಿನ ವಿತರಣಾ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸುವಂಥಾದ್ದು, ಅದರ ಬಗ್ಗೆ ಅಂದಾಜುಗಳು ತಯಾರಿಸಲ್ಪಟ್ಟಿದೆ. ಅದು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಉಮೇಶ್ ವಿ. ಕತ್ತಿ : ಹುಕ್ಕೇರಿ ಮತ್ತು ಸಂಕೇಶ್ವರ ಹಾಗೂ ಇತರೆ 16 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಳೆದ 5 ವರ್ಷಗಳ ಹಿಂದೆ ಮಾಡಲಾಗಿದೆ. 12 ಕೋಟಿ ರೂ. ವೆಚ್ಚ ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರೂ ಸಹ ಇವತ್ತಿಗೂ ಸಹಿತ ಹುಕ್ಕೇರಿಯಲ್ಲಾಗಲೀ, ಸಂಕೇಶ್ವರದಲ್ಲಾಗಲೀ ನೀರು ಪೂರೈಕೆಯಾಗುವಂಥ ಪೈಪ್‌ಲೈನ್ ಇಲ್ಲದೇ ಇರುವುದರಿಂದ ಬಹಳ ತೊಂದರೆಯಾಗುತ್ತಾ ಇದೆ. ಇದು ಗಡಿ ಪ್ರದೇಶವಾಗಿರುವುದರಿಂದ, ಪಕ್ಕದ ರಾಜ್ಯವಾದ ಮಹಾರಾಷ್ಟ್ರದ ಜನಗಳ ಸಂಪರ್ಕವೂ ಇರುವುದರಿಂದ ಈ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅಲ್ಲಿ ಸಾಕಷ್ಟು ನೀರು ಇದೆ, ಆದರೆ ಸರಿಯಾಗಿ ವಿತರಣೆ ಮಾಡುವುದಕ್ಕಾಗುತ್ತಾ ಇಲ್ಲ. ಈ ದೃಷ್ಟಿಯಿಂದ ಮುಖ್ಯಮಂತ್ರಿಗಳು ಕೂಡಲೇ ಮಂಜೂರಾತಿ ಕೊಟ್ಟು ಕೆಲಸವನ್ನು ಪ್ರಾರಂಭಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಇದರ ಅವಶ್ಯಕತೆಯನ್ನು ರಾಜ್ಯಸರ್ಕಾರ ಗಮನಿಸಿದೆ. ಈ ವರ್ಷ ಇದರ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡುತ್ತೇವೆ.

ರಾಜ್ಯ ರಸ್ತೆ ಸಾರಿಗೆ ಬಸ್ ದರ ಇಳಿಸುವ ಬಗ್ಗೆ

368(3408) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಪ್ರಯಾಣ ದರವನ್ನು ಹೆಚ್ಚಿಸಿರುವುದು ನಿಜವೇ;

ಆ) ಹಾಗಿದ್ದರೆ ಇದಕ್ಕೆ ಕಾರಣವೇನು;

ಇ) ಕೇಂದ್ರ ಸರ್ಕಾರವು ಅನೇಕ ಬಾರಿ ಪೆಟ್ರೋಲ್ ಮತ್ತು ಡೀಸಲ್ ಬೆಲೆಯನ್ನು ಕಡಿಮೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಈ) ಬಂದಿದ್ದಲ್ಲಿ, ರಾಜ್ಯ ಸಾರಿಗೆ ಸಂಸ್ಥೆ ಪ್ರಯಾಣ ದರವನ್ನು ಕಡಿಮೆ ಮಾಡದಿರಲು ಕಾರಣವೇನು;

ಉ) ಯಾವಾಗಿನಿಂದ ಬಸ್ ಪ್ರಯಾಣ ದರವನ್ನು ಕಡಿಮೆ ಮಾಡಲಾಗುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ನಿಜ,

ಆ) ಕಾರಣಗಳೇನೆಂದರೆ:

i) ಇಂಧನ ದರದಲ್ಲಿ ಹೆಚ್ಚಳ,

ii) ಕಾರ್ಯಾಚರಣೆ ವೆಚ್ಚದ ಹೆಚ್ಚಳ.

ಇ) ಬಂದಿದೆ.

ಈ) ರಾಜ್ಯ ಸಾರಿಗೆ ಸಂಸ್ಥೆಯು ಪ್ರಯಾಣ ದರವನ್ನು ಇಂಧನಗಳ ದರಗಳ ಏರಿಳಿಕೆಯನ್ನು ಹಾಗೂ ಕಾರ್ಯಾಚರಣೆಯನ್ನು ಅನುಸರಿಸಿ ನಿಗಧಿ ಮಾಡುತ್ತದೆ. ಅದರಂತೆ, ಆಗಿಂದಾಗ್ಗೆ ಪರಿಗಣಿಸಲಾಗುತ್ತದೆ.

ಉ) ಪರಿಗಣಿಸಲಾಗುವುದು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಪ್ರಯಾಣ ದರ ಹೆಚ್ಚಿಗೆ ಬಗ್ಗೆ ನಾನು ಪ್ರಶ್ನೆ ಕೇಳಿರುವಂಥ ಸಂದರ್ಭದಲ್ಲಿ "ದರವನ್ನು ಹೆಚ್ಚಿಸಿರುವುದು ನಿಜ" ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಇಂಧನ ದರದಲ್ಲಿ ಹೆಚ್ಚಳ ಮತ್ತು ಕಾರ್ಯಾಚರಣೆ ವೆಚ್ಚದ